(24) 2

Regd. No B G. 155

6—2—1965

48 th Year
ನೇ ವರ್ಷ
★
Sri 'Satyavadi
— DAILY —
MYSORE

ಸತ್ಯವಾದಿ

ಶಾಶ್ವತಕರು— ಅರಮನೆ ಬಗ್ಗೆತ್ತಾಯ ... ಕೆಲ್ಯಾತಾರು 25ಪೈ|

ಪ್ರಮುಖ ಜಿ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪೈ

Protect the Cow
ಗೋಸಂರಕ್ಷಣೆ ಮಾಡಿ

ವಾರ್ತಾತರಂಗ

ನವದೆಹಲಿ— ಪಾಕಿಸ್ತಾನದಲ್ಲಿ ಬಿಡಿ ದಪ್ಪಗಳ ಸಂಖ್ಯೆ ಹೆಚ್ಚುತ್ತಿದೆಯೆಂದೂ ವಿಚಾರವಾದಿಗಳು ಸಾರ್ವಜನಿಕ ಜೀವನದಿಂದ ದೂರಯಾಗುತ್ತಾ ನಡೆದಿದ್ದಾರೆಂದೂ ಕರಾಚಿಯ ಪ್ರಭಾವಿ ಪತ್ರಿಕೆಯೊಂದು ವರದಿ ಮಾಡಿದೆ : ಪತ್ರಿಕೆಯ ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಗಳ ಮೇಲೆ ಪ್ರತಿಬಂಧ ಅಡಳಿತದ ಅನ್ಯಾಯಗಳ ವಿರುದ್ಧ ಪರಿಹಾರ ಪಡೆಯಲು ಹಾಕಿದ ಕೇಸುಗಳಿಗಿದ್ದ ಕಾನೂನಿನ ಬೆಂಬಲದ ಅಪಹರಣ ಇವೆಲ್ಲವೂ ಸಂಕಾರಕ್ಕೆ ಜನತೆಯಲ್ಲಿ ವಿಶ್ವಾಸವಿಲ್ಲದೆಂಬುದನ್ನು ತೋರಿಸುತ್ತದೆಯೆಂದೂ ಪತ್ರಿಕೆಯು ತಿಳಿಸಿದೆ

ನವದೆಹಲಿ— ಕಳೆದ ಎರಡು ತಿಂಗಳಲ್ಲಿ ಸುಮಾರು 2000 ನಿರಾಶ್ರಿತ ಕುಟುಂಬಗಳು ವನ ಮತ್ತು ಕಾಡಿನ ತಿಂಗಳನ್ನು ಬಿಟ್ಟು ಓಡಿಹೋಗಿವೆ : ಅವರು ಈ ಹಿಂದೆಯೇ ಬಂದ ವಲಸೆಗಾರಾಗಿದ್ದು ಅವರು ಪರಿಹಾರ ಮತ್ತು ಪುನರ್ವಸತಿ ಸೌಲಭ್ಯವನ್ನು ಪಡೆಯಲು ದುರುದ್ದೇಶ ಹೊಂದಿದ್ದಾರೆಂದು ಊಹಿಸಲಾಗಿದೆ.

ನವದೆಹಲಿ— ಈ ವರ್ಷ ಎಳ್ಳಿನ ಬೆಳೆ 3871000 ಎಕ್ರೆಗಳಲ್ಲಾಗಿವೆಯೆಂದು ಅಂದಾಜು ಮಾಡಲಾಗಿದೆ.

ಅಮೃತಸರ— ಭಾರತದ ರಿಪಬ್ಲಿಕ್ ಪಾರ್ಟಿಯ 13 ಮಂದಿ ಸತ್ಯಾಗ್ರಹಿಗಳು ಜೈಲಿನಲ್ಲಿ ಪತ್ರಿಯವರೆಂದು ಪಾರ್ಟಿಯ ಕಾರ್ಯಕಾರಿ ಸಮಿತಿಯು ನಿರ್ಣಯ ತಿಳಿಸುತ್ತದೆ.

ಸಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಅಷ್ಟಾವಧಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಜ್ಯೋತಿಷ್ಯಕ್ಕ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ

7 ಭಾನುವಾರ ಪುಷ್ಯ ಶೇಷತಿ

★

ಸೋಮವಾರ ರಾಷ್ಟ್ರಪತಿ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

ವಾರ್ತಾ ವಿಶೇಷಗಳು

★

ತಿರುವನಂತಪುರಂ— 1961 ರ ಸೆನ್ಸಸ್ಸು ಬಗ್ಗೆ 1500 ಪುಟುಗಸು ಪ್ರಕಟವಾಗುವುದೆಂದು ಸೆನ್ಸಸ್ಸು ಕಮಿಷನರು ಹೇಳಿದರು.

★

ಮೈಸೂರು— ಪರಮಾಣು ಶಕ್ತಿ ಸ್ಥಾಪನೆಗಳು ಪ್ರತಿಬಂಧಿಸಲ್ಪಡದೆ ವಿಶ್ವಕ್ಕೆ ಸುರಕ್ಷತೆ ಇಲ್ಲವೆಂದು ಅಖಿಲ ಭಾರತ ಶಾಂತಿ ಸಮಿತಿ ಉಪಾಧ್ಯಕ್ಷ ಶ್ರೀ ವೆಂಕಟೇಶಯ್ಯಂಗಾರ್ ಹೇಳಿದರು

★

ಟಿಕ್ಕೂರು— ಇಲ್ಲಿಯ ವಕೀಲ ಸಂಘದವರು ಹಿಂದಿಯನ್ನು ಭಾರತದ ಅಧಿಕೃತ ಭಾಷೆಯನ್ನಾಗಿ ಮಾಡಿರುವುದನ್ನು ಪ್ರತಿಭಟಿಸಿ ಠರಾವು ಮಾಡಿರುವರು.

★

ಬೊಂಬಾಯಿ— ಗೋವಾವನ್ನು ವಶಪಡಿಸಿಕೊಳ್ಳಲು ಪೋರ್ಚುಗೀಸರೊಡನೆ ಸೇರ್ಪಡೆ ಮಾಡುವ ಪ್ರಶ್ನೆಯನ್ನು ಕೂಡಲೇ ವ್ಯವಸ್ಥೆ ಮಾಡದಿದ್ದರೆ ಈ ಬಗ್ಗೆ ಜಳವಳಿಗಾಗಿ ಒಂದು ಸಂಸ್ಥೆ ಪ್ರಾರಂಭಿಸಬೇಕಾಗುವುದೆಂದು ಗೋವಾ ಪ್ರಧಾನಿ ಹೇಳಿದರು

★

ನವದೆಹಲಿ— 1961 ರ ಸೆಪ್ಟೆಂಬರ್ ಪ್ರಕಾರ 440 ಮಿಲಿಯ ಜನಸಂಖ್ಯೆಯಲ್ಲಿ 138.43 ಮಿಲಿಯ ಶಿಡ್ಯೂಲ್ಡ್ ಭಾಷೆಯು ಹಿಂದಿ, 37.66 ಮಿಲಿಯ ತೆಲುಗು, 37.83 ಮಿಲಿಯ ಬಂಗಾಳಿ ಆಗಿರುತ್ತದೆ ; ಕನ್ನಡ 17.41

★

ಬೊಂಬಾಯಿ — ಸಂಕಷ್ಟದಲ್ಲಿದ್ದ ವಾಗಿ ಸುತ್ತಾಡುತ್ತಿದ್ದ ಇಬ್ಬರನ್ನು ತೋಧಿಸಿ, ಅವರಲ್ಲಿದ್ದ ವಿದೇಶೀ ಗುರುತಿದ್ದ 1-20 ಲಕ್ಷ ಬೆಲೆಯ 800 ತೊಲ ಧಂಗಾಂದನ್ನು ವಶಪಡಿಸಿಕೊಂಡರು.

★

ಭಾರತ ಅಣುಬಾಂಬನ್ನು ತಯಾರಿಸುವುದಿಲ್ಲ !

★

ಭಾರತಕ್ಕೆ ಅಪಾಯ ಒದಗಿದರೆ

ಲಂಡನ್— ಭಾರತದ ಮೇಲೆ ಯಾವುದಾದರೂ ವಿದೇಶೀ ಶಕ್ತಿ ಬಿದ್ದರೆ, ಕೂಡಲೇ ಅವಶ್ಯಕ ಸಹಾಯ ಕುರಿತು ಭಾರತದೊಡನೆ ಪರಾಮರ್ಶೆ ನಡೆಸಲಾಗುವುದೆಂದು ಕಾಮನ್ಸ್ ಸಭೆಯಲ್ಲಿ ಪ್ರಧಾನಿ ವಿಲ್ಸನ್ ತಿಳಿಸಿದರು.

★

ಹಿಂದೀ ವಿರುದ್ಧ

ಮದ್ರಾಸಿನಗರ— ಕಪ್ಪು ಬಾಡ್ಜನ್ನು ಧರಿಸಿದ 500 ವಿದ್ಯಾರ್ಥಿಗಳು ಕೈಲಿ ಕಪ್ಪು ಬಾವುಟ ಹಿಡಿದುಕೊಂಡು ಹಿಂದೀ ವಿರುದ್ಧ ಘೋಷಣೆ ಮಾಡಿ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಕಡೆಗೆ ಸುಟ್ಟುಹಾಕಿದರು.

ಚೀನಾ ಅಣು ಬಾಂಬನ್ನು ಸಿಡಿಸಿದರೂ ಭಾರತವು ಅದನ್ನು ತಯಾರಿಸುವುದಿಲ್ಲವೆಂದು ಪ್ರಧಾನಿ ಶಾಸ್ತ್ರಿಗಳು ದೆಹಲಿಯಲ್ಲಿ ತಿಳಿಸಿದರು.

★

ಶಾಲ್ಯನೇ ಯೋಜನೆಯ ಅಂತ್ಯದ ವೇಳೆಗೆ ಭಾರತ ಆಹಾರ ಸ್ವಾವಲಂಬನೆ ಹೊಂದಲು ಪ್ರಯತ್ನಿಸುವುದೆಂದು ಭಾರತ ಆಹಾರ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಹೈದರಾಬಾದಿನಲ್ಲಿ ಹೇಳಿದರು.

★

ಸಿಂಹಳ ಭಾರತೀಯರು ಒಪ್ಪಂದ ಮಾಡಲು ಸಿಂಹಳದಲ್ಲಿ ವಿಶೇಷ ಶಾಖೆ ಆರಂಭವಾಗಿದೆ.

★

ಬೆಂಗಳೂರು— ಭಾರತ ಆಹಾರ ಕಾರ್ಪೋರೇಷನ್ ರಾಜ್ಯದ 7 ಜಿಲ್ಲೆಗಳಲ್ಲಿ ಭತ್ತ ಪಡೆಯುವ ಏರ್ಪಾಡನ್ನು ನೇರವಾಗಿ ಕೊಳ್ಳಲು ನಿರ್ಧರಿಸಿದೆ

ಎಂತಹ ಹೋರಾಟವ್ವಾಪ !

ಥೈಲ್ಯಾಂಡಿನ ಪ್ರಧಾನಿ ಶಾರಿತ್ ತಾನರಾತ್ ಸತ್ಯನುಡಿಯ ಅತನ ಕೃಪೆಗೆ ಪಾತ್ರರಾಗಿದ್ದುದಾಗಿಯೂ, ಅತನ ಆಸ್ತಿಪಾಸ್ತಿ ಸ್ವಲ್ಪ ಪಡೆಯುವುದಾಗಿಯೂ ಭಾವಿಸಿದ್ದ ನೂರಕ್ಕೂ ಹೆಚ್ಚು ಮಂದಿ ಮಹಿಳೆಯರು ಹೆಸರನ್ನು ಹತ್ಯಿಂಕಾಳು ಪತ್ರಿಕೆಗಳು ಪ್ರಕಟಿಸಿದ್ದವು ; ಒಳ ನರ್ತಕಿಯ 'ತಿರಿ ಪತ್ನಿಯರು' ಎಂದು ಹಿಂದಿಸದರು ಇರಬಹುದಾದ 51 ಮಂದಿ ಅಪರಿಚಿತರು, ಒಳ್ಳೇ ಮನೆ, ಮೋಟಾರು ಮುಕ್ತಕರ ಸಾಕಾರ್ಯಗಳು, ಜೊತೆಗೆ ಒಂದಷ್ಟು ಮಂದಿ ಪುಳ್ಳಿಸನ್ನು ಹೊಂದಿದ್ದಾರೆ : ಈ ತಿರಿ ಪತ್ನಿಯರು ಸಾರಿಟ್ಟಾಸ ಆಸ್ತಿಯಲ್ಲಿ ಪಾಲಿಗೆ ಕೋರ್ಟಿನಲ್ಲಿ ಹಕ್ಕುಹಾಕಿದರು.

ಪ್ರಧಾನಿಯ ಹಿಂದಿನ ಶೇಖರಣೆ ಕಾರ್ಯವು ಅತಿ ಜಾಲೋಕ್ಷಿನಿಂದ ಕೂಡಿದ್ದಾಗಿದ್ದು, ಅವನಲ್ಲಿ ರಬಹುದೆಂದು ಯೋಚಿಸಲಾಗಿದ್ದ ಸಂಪತ್ತಿಗಿಂತ ಹೆಚ್ಚು ಅಡಂಬರವಾಗಿ ಕಾಣುತ್ತಿದೆ : ಆಸ್ತಿಗೆ ಹಕ್ಕು ಒತ್ತಾಯಿಸಿರುವ ಅತನ ಎಳ್ಳು ಪೆಥಾಯುಂಗ್ ವಿಚಿತ್ರಳು ಮತ್ತು ಅತನ ಹಿಂದಿನ ಪತ್ನಿಯೊರ್ವರಲ್ಲಿ ಇಬ್ಬರ

ಪೈಕ್ಕರು ಅವನ ಆಸ್ತಿಯು ಕೆಡೇಪಕ್ಷ 28 ಬಿಲಿಯ ಟಿಕಳ್ ಅಥವಾ 743 ಡಾಲ್ ರುಗಳೆಂದು ಅಂದಾಜು ಮಾಡಿದ್ದಾರೆ : ಸಾಧಾರಣ ಸಿಪಾಯಿಯಾಗಿದ್ದು ಕ್ರಮಾನುಪದವಿಗೇರಿದ ಒಬ್ಬನಿಗೆ ಇದು ಬಹಳ ಹೆಚ್ಚು ! ಆದರಿಂದ ಅವನ ಆಸ್ತಿಯ ಹುಡುಕಿಕೆ ನಡೆಯುವುದಕ್ಕೆ ಮುಂಚೆ ಅವನ ಹೆಂಡತಿಗೆ ಸರಕಾರಿ ಹಣವೇನಾದರೂ ಬಿದ್ದಿದೆಯೇ ಎಂದು ನೋಡಲು 5 ಜನ ಸರಕಾರಿ ಏಜೆಂಟ್ರು, ಅವನ ಸಂಬಂಧ ಪ್ರಧಾನ ಠಾಣ್ಯಕ್ಕೆ ಕಿಟ್ಟಿಕಚೇರಿಗೆ ಸೇವೆ ಮಾಡಿದನು.

ಈ ಕಮಿಟಿಯು ವಿವಿಧ ಬ್ಯಾಂಕುಗಳಲ್ಲಿ ಇಡಲಾಗಿದ್ದ 400 ಮಿಲಿಯ ಟಿಕಳ್ (20 ಮಿಲಿಯ ಡಾಲರು) ಪತ್ತೇಹಚ್ಚಿದರು ; ಇವನ ಬಂಧುಗಳ ಹೆಸರಿನಲ್ಲಿ 15 ವಿಶೇಷ ಖಾತೆ ಪಡೆದ ಕಂಪೆನಿಗಳಿದ್ದು ಪ್ರತಿಯೊಂದೂ ಸರಕಾರಿ ವ್ಯಾಪಾರದ ಸರ್ವಸ್ವಾಮ್ಯವನ್ನು ಹೊಂದಿದ್ದವು.

ಚಿನ್ನದ ಆಮದಿಗೂ ಸರಕಾರಿ ಪ್ಲೈವುಡ್ ಮಾರಾಟಕ್ಕೂ ಈ ಕಂಪೆನಿಗಳು ವೊಣ್ಣ ಸ್ವಾಮ್ಯವನ್ನು ಪಡೆದಿದ್ದವು : ಸರಕಾರಿ ಮದ್ಯ ಮಾರಾಟದ ಹಕ್ಕು ಒಂದು ಕಂಪೆನಿಗಿದ್ದರೆ, ಮತ್ತೊಂದಕ್ಕೆ ರಫ್ತು ಉದ್ಯೋಗ ಲಾಟರಿ ಟಿಕೇಟು ಮಾರಾಟದ ಹೀಗೆ ಆ ಕಂಪೆನಿಗಳು ಒಂದೆಲ್ಲವೆಂದು ಹಕ್ಕು ಪಡೆದಿದ್ದವು : ಜೊತೆಗೆ ಸಾರಿಗೆ ಮಂತ್ರಿಯು ವಾಣಿಜ್ಯ ವಿಮಾನ ಹಿಡಿಯುವ ದೋಣಿ, 50 ಮೋಟಾರು, 30 ಬ್ಯಾಂಕಾಕ್ ಭವನಗಳು ವಾರ್ಷಿಕ 3000 ಎಕ್ರೆ ಜಮೀನು ಬೊಂದಿದ್ದರು.

ಸಂಬಂಧ ಸರಕಾರಿ ಹಣ ಎಷ್ಟು ನುಂಗಿರುವೆನೆನ್ನುವುದನ್ನು ಕಂಡುಹಿಡಿಯಲು ನೇಮಿಸಲ್ಪಟ್ಟಿರುವ ಸಮಿತಿಯು ಇಲ್ಲಿಯವರೆಗೆ 77-8 ಮಿಲಿಯ ಡಾಲರು ಸರಕಾರದ ಹಣ ಅವರ ಸಂಪತ್ತಿನಲ್ಲಿ ಸೇರಿದೆಯೆಂಬುದನ್ನು ಪತ್ತೇಹಚ್ಚಿರುವದು : 1-2 ಮಿಲಿಯ ಟಿಕೇಟುಗಳ ರಾಜ್ಯದ ನಿಧಿಯಲ್ಲಿ (60000 ಡಾಲರುಗಳು) ಒಂದು ಭಾಗ ಅವನ ಕಿರೀ ಹೆಂಡಂಗೆ ಹೋಗಿದೆಯೆಂದು ಸಮಿತಿ ಅಧ್ಯಕ್ಷರು ಹೇಳಿರುವರು ಈ ಹಣವು ಡಜನ್ಯ ಕಾರ್ಯಗಳಿಗೆ ಏಂಜಿ ನಿಧಿಗೆ ಸರಕಾರಿಂದ ಸ್ಪೆಷಲ್ ಲೆಟ್ಟಿಂದ ಬಂದಿದೆ ಎಂತಹ ಹೇಯ ಕಾರ್ಯ ! (Truth)

ಶ್ರೀ ಗಣೇಶ ಮಂಗಳಾರತಿ

ಮೈಸೂರು — ದಿವಾನ್ಸ್ ರಂಸೆಯಲ್ಲಿರುವ ಮೈಸೂರು ಡಿವಿಜನಲ್ ಗೋಲ್ಡ್ ಸ್ಮಿತ್ಸ್ ಅಸೋಸಿಯೇಷನ್ನಿನಲ್ಲಿ ಗುರುವಾರ ಪೂಜೆ ಶ್ರೀ ಗಣೇಶ ಮಂಗಳಾರತಿಯು ಅತ್ಯಂತ ವೈಭವವಾಗಿ ನೆರವೇರಿತು : ಸಂಘದ ಸದಸ್ಯರೂ, ಮಿತ್ರರೂ, ಪತ್ರಿಕೋದ್ಯೋಗಿಗಳೂ ಬಹುಮಂದಿ ಆಗಮಿಸಿದ್ದರು : ಅಧ್ಯಕ್ಷರಿಗೆಂದು ಅಧ್ಯಕ್ಷ ಶ್ರೀ ಹೆಚ್ ಎಸ್ ನರಸಿಂಹರೂರ್ತಿ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಎಂ ಕೆ ಮುಕುಂದ ರಾವ್ ಸ್ವಾಗತಿಸಿದರು : ಮಂಗಳಾರತಿ ನಂತರ ಬಿಸಿಬೇಳೆಭಾತ್ ವಿತರಣೆ ಮಾಡಲ್ಪಟ್ಟಿತ್ತು : ಸಂಘದವರು ತಮ್ಮ ಕರ್ತವ್ಯವು ಏಚಾರಗಳಿದ್ದ ಕಿರುಹೊತ್ತಿಗೆಯನ್ನು ಅಧ್ಯಕ್ಷರಿಗೆ ಸಮರ್ಪಿಸಿದರು. ಶ್ರೀ ಗಣೇಶನು ಸಕಲರಿಗೂ ಕಷ್ಟಂಗಳ ದಯಪಾಲಿಸಲಿ.

ಗೋಸಂರಕ್ಷಣೆ ಹಣ್ಣಾಣದಲ್ಲಿ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ಕಳುಹಿದೆ ಮಾಡಿದ್ದರುವವರು ದಯವಿಟ್ಟು ಶೀಘ್ರವಾಗಿ ಕಳುಹಿಸಬೇಕಾಗಿ ವಿನಂತಿ

ಡಾಕ್ಟರ್ ಪಿ ಎಸ್ ನಂಜರಾಯಪ್ಪ, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಡಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಆರ್ ಸಂತಾನಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
- Dharma Prachara Nirata M. S. Krishna Rao
the Satyavadi Press, Chamarajapuram, Mysore 4

ವುಡ್‌ಲ್ಯಾಂಡ್ 5-2-65 ರಿಂದ
ಅಮೋಘ ಅರ್ಥಭ
— ಅಮೋಘ ಆಕ್ಷನ್ ಹಳೆಯ ಹಿಂದಿ ಚಿತ್ರ —
ಹರ್ಕ್ಯುಲೆನ್ HERCULES
ನಟವರ್ಗ — ದಾರಾಸಿಂಗ್, ನಿಶಿ, ಹೆಲೆನ್, ಮಹೇಶ್, ವ್ಯಾಸ್, ಮಹಾಬತಿ
ಸಾಹಸಮಯ ರೋಮಾಂಚಕ ಅದ್ಭುತ ಚಿತ್ರ : ನೃತ್ಯ ಸಂಗೀತ ವಿನೋದವಿದೆ
[ದಿನವಹಿ 3 ಪ್ರದರ್ಶನಗಳು]

ಆಪೆರಾ— 4-2-65 ರಿಂದ
ಉಲ್ಲಾಸ ಪಯಣ
— ತಮಿಳು —
ಪಾತ್ರ— ಶಂಗವೇಲು, ರಾಜೇಂದ್ರನ್, ವಿಜಯಕುಮಾರಿ, ಎಸ್, ವರಲಕ್ಷ್ಮಿ
[ದಿನ 3 ಆಟಗಳು]

ಅಶೋಕಾ ಏಜೆನ್ಸೀಸ್
ಮೈಸೂರು
ಆಲ್ಯಾಂಡ್ರಾ ಬಿಲ್ಡಿಂಗ್ಸ್, ಮೈಸೂರು
ನಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.
ಎಲ್ಲ ಬಗೆಯ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

Help The ' Gorakshana '
"ಗೋರಕ್ಷಣ"ಕ್ಕೆ ಬೆಂಬಲಿಗರಾಗಿರಿ
ಶ್ರೀ ದ್ವಾರಕಾ ಜಗದ್ಗುರು ಮಹಾಶಂಕರಾಚಾರ್ಯ ಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಶಂಕರಾಚಾರ್ಯ ಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದಾಗಿದೆ
ಕರ್ನಾಟಕದಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಸ್ತ್ರಾಧಾರ ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪೂರ್ಣ ಮಾಸಪತ್ರಿಕೆ.
ವಾರ್ಷಿಕ ಚಂದಾ 50 ರೂಪಾಯಿ ; ಗೋರಕ್ಷಣ ಕ್ಕೆ ಲೇಖನಗಳನ್ನೂ, ಪ್ರೋತ್ಸಾಹ ಧನವನ್ನೂ ಧನ್ಯವಾದಪೂರ್ವಕವಾಗಿ ಸ್ವೀಕರಿಸಲಾಗುವುದು
ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

SHAKTI
SUDHA
Superb Tonic